ಅ) *ಈ ವರ್ಷದಲ್ಲಿ ಎಷ್ಟು ಕಿ.ಮೀ. ಕೆಲಸ ಮಾಡಲಾಗುತ್ತದೆ?*

ಇ) *ಈ ಯೋಜನೆಗೆ ಸಂಬಂಧಪಟ್ಟಂತೆ ವಿದ್ಯುಚ್ಛಕ್ತಿ ಮತ್ತು ಟ್ರಾನ್ಸ್‌ಫಾರ್ಮರ್ ಬಗ್ಗೆ ಏನೇನು ಕ್ರಮ ಕೈಗೊಂಡಿದೆ?*

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು):

ಅ) ಕಾಲುವೆಯ 4 ಕಿ.ಮೀ. ಉದ್ದದ ಕೆಲಸಗಳು ಭಾಗಶಃ ಆಗಿರುತ್ತದೆ.

ಆ) ಈ ವರ್ಷದಲ್ಲಿ ಪ್ರಾರಂಭಿಸಿದ 10 ಕಿ.ಮೀ. ಉದ್ದ ಕಾಲುವೆಯ ಕೆಲಸಗಳನ್ನು ಮಾಡುವ ಕಾರ್ಯಕ್ರಮವಿದೆ.

ಇ) ಈ ಯೋಜನೆಗೆ ಬೇಕಾಗುವ ವಿದ್ಯುಚ್ಛಕ್ತಿ ಸರಬರಾಜಿಗೆ ತೇವಣಿ ಹಣ ಪಾವತಿ ಬಗ್ಗೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯೊಂದಿಗೆ ಪತ್ರ ವ್ಯವಹಾರ ನಡೆಸಲಾಗುತ್ತಿದೆ. ಪಂಪುಗಳು ಮತ್ತು ಟ್ರಾನ್ಸ್‌ಫಾರ್ಮರ್‌ಗಳನ್ನೊಳಗೊಂಡ ಹೆಡ್‌ವರ್ಕ್ಸ್ ಕೆಲಸಗಳಿಗಾಗಿ 16.26ಕೋಟಿ. ರೂ. ಗಳ ಅಂದಾಜಿಗೆ ಆಡಳಿತಾತ್ಮಕ ಅನುಮೋದನೆ ನೀಡಿದ್ದು, ಮುಂದಿನ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಮೈಸೂರು ಜಿಲ್ಲೆಗೆ ಸಣ್ಣ ಮತ್ತು ದೊಡ್ಡ ಕೈಗಾರಿಕೆಗಳಿಗಾಗಿ ಸಬ್ಸಿಡಿ ಹಣ ಮಂಜೂರು.

452-ಶ್ರೀ ಕೆ.ಎಸ್. ಕಾಳಮರಿಗೌಡ (ಪಿರಿಯಾಪಟ್ಟಣ): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1990-91 ಮತ್ತು 1991-92ನೇ ಸಾಲುಗಳಲ್ಲಿ ಮೈಸೂರು ಜಿಲ್ಲೆಗೆ ಸಣ್ಣ ಮತ್ತು ದೊಡ್ಡ ಕೈಗಾರಿಕೆಗಳಿಗಾಗಿ ಎಷ್ಟು ಸಬ್ಸಿಡಿ ಹಣ ಮಂಜೂರು ಆಗಿದೆ?*

ಆ) *ಅದರಲ್ಲಿ 1990-91ನೇ ಹಾಗೂ 1991-92ರಲ್ಲಿ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ?*

ಇ) *ಇನ್ನೂ ಎಷ್ಟು ಹಣ ಬಿಡುಗಡೆ ಮಾಡಬೇಕಾಗಿದೆ?*

ಈ) *ಈ ವಿತರಣೆಯನ್ನು ಯಾವ ಆಧಾರದ ಮೇಲೆ ಮಾಡಲಾಗಿದೆ?*

ಶ್ರೀ ಎಂ. ವೀರಪ್ಪ ಮೊಯ್ಲಿ (ಮುಖ್ಯ ಮಂತ್ರಿಗಳು):

ಅ) 1990-91 : ರೂ. 41.60 ಲಕ್ಷಗಳು

1991-92 : ರೂ. 196.19 ಲಕ್ಷಗಳು

ಆ) 1990-91ನೇ ಸಾಲಿಗೆ ಸಂಬಂಧಿಸಿದಂತೆ ರೂ. 4010050.00ಗಳ ಸಹಾಯಧನವನ್ನು 14 ಘಟಕಗಳಿಗೆ ಬಿಡುಗಡೆ ಮಾಡಲಾಗಿದೆ. 1991-92ನೇ ಸಾಲಿಗೆ ಸಂಬಂಧಿಸಿದಂತೆ ಇಲ್ಲಿಯವರೆಗೆ ಬಿಡುಗಡೆ ಮಾಡಿರುವುದಿಲ್ಲ.

ಇ) 1990-91ನೇ ಸಾಲಿಗೆ ರೂ. 149950.00 ಗಳಿಗೆ (2 ಘಟಕಗಳಿಗೆ) ಮತ್ತು 1991-92 ನೇ ಸಾಲಿಗೆ ರೂ. 196.19 ಲಕ್ಷಗಳ (113 ಘಟಕಗಳಿಗೆ)ರಾಜ್ಯ ಸಹಾಯಧನವನ್ನಾಗಿ ಬಿಡುಗಡೆ ಮಾಡಬೇಕಾಗಿದೆ.

ಈ) ಕೆಲವು ವಿಶೇಷ ಸಂದರ್ಭಗಳನ್ನು ಬಿಟ್ಟು ಇಲಾಖೆಯಿಂದ ಸಹಾಯಧನ ಮಂಜೂರಾತಿ ಪಡೆದ ದಿನಾಂಕವನ್ನು ಆಧಾರವನ್ನಾಗಿಟ್ಟುಕೊಂಡು ಹಣವನ್ನು ಬಿಡುಗಡೆ ಮಾಡಲಾಗುತ್ತದೆ.